ಸಿ.ಸಿ ನಂಬ್ರ: 1270/2023
ಪಿ.ಡಬ್ಲ್ಯೂ : 1

ದಿನಾಂಕ: 31-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಪಿರ್ಯಾದಿ ಪರ ಶ್ರೀ ಟಿ ಬಿ ಎಸ್ ವಕೀಲರಿಂದ

1. ನಾನು ಪಿರ್ಯಾದಿ ಸೊಸೈಟಿಯಲ್ಲಿ ಸೊಸೈಟಿಯ ಮೂಲಕ ಮೀನು ಖರೀದಿ ಮಾಡಿದ ವರ್ಷ 2011-2012. ನಾನು ಎರಡು ವರ್ಷಗಳ ಕಾಲ ವ್ಯವಹಾರ ಮಾಡಿರುತ್ತೇನೆ. 2 ವರ್ಷಗಳ ಅವಧಿಯಲ್ಲಿ 7 ರಿಂದ 8 ಲಕ್ಷಗಳವರೆಗೆ ವ್ಯವಹಾರ ಮಾಡಿರುತ್ತೇನೆ. ನಮ್ಮ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ಅಕೌಂಟ್ ಪುಸ್ತಕವನ್ನು ಇಟ್ಟುಕೊಂಡಿರುವುದಿಲ್ಲ. ನಾನು ಪಿರ್ಯಾದಿ ಸಂಸ್ಥೆಯಲ್ಲಿ ವ್ಯವಹಾರ ಮಾಡಿದ ಬಗ್ಗೆ ಪಿರ್ಯಾದಿ ಸೊಸೈಟಿಯವರು ಲೆಡ್ಜರ್ ಅಕೌಂಟ್ ಹಾಜರು ಪಡಿಸಿದ್ದು ನಾನು ಅದನ್ನು ತೆಗೆದುಕೊಂಡು ನೋಡಿರುವುದಿಲ್ಲ. ಆ ಲೆಡ್ಜರ್ ಬುಕ್ ನಲ್ಲಿ ಬರೆದಿರುವ ಎಂಟ್ರಿಗಳು ಸರಿಯೋ ತಪ್ಪೋ ಎಂದು ಹೇಳಲು ಆಗುವುದಿಲ್ಲ.

2. ವ್ಯವಹಾರ ಎಂದರೆ ಮೀನು ಖರೀದಿಯ ಯಾರ್ಡ್ ಇರುತ್ತದೆ ಎಂದರೆ ಸರಿ. ಆ ಯಾರ್ಡ್ ನಲ್ಲಿ ಪೀಶರ್ ಮ್ಯಾನ್ ಮೀನು ತೆಗೆದುಕೊಂಡು ಬಂದು ಮಾರಾಟಕ್ಕೆ ಇಡುತ್ತಾರೆ ಎಂದರೆ ಸರಿ. ಆ ಮೀನುಗಳನ್ನು ನಾವು ಕ್ರಯ ಮಾಡುತ್ತೇವೆ ಎಂದರೆ ಸರಿ. ಅದಕ್ಕೆ ಹಣ ನಗದಾಗಿ ನಾವು ಕೊಡುವ ಬದಲು ಸೊಸೈಟಿಯವರು ಕೊಡುತ್ತಾರೆ ಎಂದರೆ ಸರಿ. ನಾವು ಆ ಮೀನನ್ನು ಮಾರಾಟ ಮಾಡಿ ಹಣವನ್ನು ಸೊಸೈಟಿಯವರಿಗೆ ಕೊಡಬೇಕು ಎಂದರೆ ಸರಿ.

3. ನಾನು 4 ಲಕ್ಷ ಕೊಡಬೇಕು ಎಂದು ಹೇಳುವ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ನಾನು 1 ಲಕ್ಷ ರೂ. ಹಣವನ್ನು ಡೆಪಾಸಿಟ್ ಇಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮೀನು ವ್ಯವಹಾರ ಮಾಡಿದ ಬಗ್ಗೆ ಸೊಸೈಟಿಯಲ್ಲಿ ಬಾಕಿ ಇದ್ದ 19,75,608/- ರೂ. ಸಂಬಂಧಪಟ್ಟಂತೆ ಚೆಕ್ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಅಷ್ಟು ಹಣ ಕೊಡಲು ನಾನು ಬಾಧ್ಯಸ್ಥನಿರುವುದಿಲ್ಲ, 3 ಜನ ಪಾರ್ಟನರ್ ಇರುತ್ತೇವೆ, ಅವರುಗಳ ಚೆಕ್ ನ್ನು ಸೊಸೈಟಿಯವರು ತೆಗೆದುಕೊಂಡಿದ್ದು ನನ್ನ ಚೆಕ್ ನ್ನು ಇಷ್ಟು ಮೊತ್ತಕ್ಕೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹಣ ಕೊಡಲು ಭಾಧ್ಯಸ್ಥನಿದ್ದರೂ ಸಹ ನನ್ನ ಜವಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ